# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಶ್ರೀಮತೀ ಪರಿಣಯ

ಕವಿ

## ಡಾ. ಶೇಣಿ ಗೋಪಾಲಕೃಷ್ಣ ಭಟ್ಟ

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦

ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com



## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಿಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನು ಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು



ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು



ರವಿ ಮಡೋಡಿ
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು

ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ

ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ

ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಗೊತ್ತಿಲ್ಲ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಶ್ರೀಕೃಷ್ಣ ಯಕ್ಷಸಭಾ, ಮಂಗಳೂರು ಪ್ರಕಟಿತ ಶೇಣಿ ಸ್ಮೃತಿ ಕೃತಿ ಪುಸ್ತಿಕೆ - ೨೦೦೬

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೫೬

**ಪಾತ್ರಗಳು :**

ದೇವೇಂದ್ರ, ಚಿತ್ರರಥ, ಮನ್ಮಥ, ನಾರದ, ಪರ್ವತ ಮುನಿ, ಅಂಬರೀಶ, ಮಂತ್ರಿ, ಮಹಾರಾಣಿ, ಶ್ರೀಮತಿ ಮತ್ತು ವಿಷ್ಣು

**ಕಥಾಸಾರಾಂಶ:**

ವಸಂತೋತ್ಸವದ ಸಂಭ್ರಮದಲ್ಲಿರುವ ದೇವೇಂದ್ರನ ಒಡ್ಡೋಲಗಕ್ಕೆ ನಾರದ ಮತ್ತು ಪರ್ವತ ಮುನಿಗಳ ಆಗಮನ. ದೇವೇಂದ್ರನು ಅವರನ್ನು ಉಪಚರಿಸಿದರೂ ದೇವತೆಗಳಿಂದ ತಿರಸ್ಕಾರ. ಇದಕ್ಕೆಲ್ಲ ಮನ್ಮಥನೇ ಕಾರಣವೆಂದು ನಾರದ ಮುನಿಗಳ ಆಪಾದನೆ. ನಾರದ ಮತ್ತು ಪರ್ವತ ಮುನಿಗಳಿಬ್ಬರಿಗೂ ಪಾಠ ಕಲಿಸಲು ಮನ್ಮಥನ ನಿರ್ಧಾರ.

ಇತ್ತ ಅಂಬರೀಷ ದೊರೆಯ ಪುತ್ರಿ ಶ್ರೀಮತಿಗೆ ಮಹಾವಿಷ್ಣುವನ್ನು ಪತಿಯನ್ನಾಗಿ ಪಡೆಯುವ ಬಯಕೆ. ದೇವಾಲಯವೊಂದರಲ್ಲಿ ಶ್ರೀಮತಿಯನ್ನು ಕಂಡ ಪರ್ವತನ ಮುನಿಗೆ ಮನ್ಮಥನ ಪ್ರಭಾವದಿಂದ ಅವಳಲ್ಲಿ ಆಕರ್ಷಣೆ ಹಾಗೂ ಮಹಾರಾಣಿಯಲ್ಲಿ ಅವಳ ಮಗಳನ್ನು ವಿವಾಹ ಮಾಡಿಕೊಳ್ಳುವುದಾಗಿ ವಿನಂತಿ. ರಾಜನ ಆಸ್ಥಾನಕ್ಕೆ ಬಂದ ನಾರದನು ಮನ್ಮಥನ ಚೇಷ್ಟೆಗೆ ಒಳಗಾಗಿ ಶ್ರೀಮತಿಯನ್ನು ವಿವಾಹ ಮಾಡಿಕೊಡಬೇಕೆಂಬ ಕೇಳಿಕೆ. ಇಬ್ಬರೂ ವಿಷಯದ ಇತ್ಯರ್ಥಕ್ಕಾಗಿ ವಿಷ್ಣುವಿನಲ್ಲಿ ಮೊರೆ. ಶ್ರೀಮತಿಯು ನೋಡಿದಾಗ ಪರ್ವತ ಮುನಿಯ ಮುಖವು ಕರಡಿಯಂತೆ ಕಾಣಲೆಂದು ನಾರದನೂ, ನಾರದನ ಮುಖವು ಕಪಿಯಂತೆ ಕಾಣಲೆಂದು ಪರ್ವತಮುನಿಯೂ ಪರಸ್ಪರ ವಿಷ್ಣುವಿನಲ್ಲಿ ವರದ ಬೇಡಿಕೆ. ಇಬ್ಬರು ಮುನಿಗಳು ಹಠಹಿಡಿದಿದ್ದರಿಂದ ಅಂಬರೀಷನಿಂದ ವಿಷ್ಣುವಿನ ಅನುಗ್ರಹಕ್ಕಾಗಿ ಪ್ರಾರ್ಥನೆ. ಸ್ವಯಂವರದ ಸಮಯದಲ್ಲಿ ಇಬ್ಬರ ಮಧ್ಯೆ ನಿಂತ ಮಹಾವಿಷ್ಣುವಿಗೆ ಶ್ರೀಮತಿಯಿಂದ ಮಾಲಿಕೆ ಸಮರ್ಪಣೆ.

**ಕವಿ ಪರಿಚಯ: (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ಡಾ. ಶೇಣಿ ಗೋಪಾಲಕೃಷ್ಣ ಭಟ್ಟರು ಕಾಸರಗೋಡಿನವರು. ಜನನ: 7-4-1918 ಮರಣ: 18-7-2006. ಅವರ ತಂದೆ ನಾರಾಯಣ ಭಟ್ಟ, ತಾಯಿ ಲಕ್ಷ್ಮಿ, ಪತ್ನಿ ದ್ರೌಪದಿ. ಯಕ್ಷಗಾನ ಕಲಾವಿದ. ಸುಪ್ರಸಿದ್ಧ ತಾಳಮದ್ದಳೆ ಅರ್ಥಗಾರ. ಅಪ್ರತಿಮ ವಾಗ್ಮಿ. ಕರ್ನಾಟಕ ಮತ್ತು ಕೇರಳ ರಾಜ್ಯ ಅಕಾಡೆಮಿ ಪುರಸ್ಕೃತ. ಕೀರ್ತನಕಾರ ಹರಿದಾಸ. ಇವರ ಅನೇಕ ಧ್ವನಿಸುರುಳಿಗಳು ದಾಖಲೆ ಮಾರಾಟ ಕಂಡಿವೆ. ಇವರು 'ಯಕ್ಷಗಾನ ಮತ್ತು ನಾನು' ಎಂಬ ತಮ್ಮ ಆತ್ಮಕಥೆಯನ್ನೂ ಬರೆದಿದ್ದಾರೆ. ಬೇರೆ ಬೇರೆ ಸಂದರ್ಭಗಳಲ್ಲಿ ಶೇಣಿಯವರು ಪ್ರಸಂಗದಲ್ಲಿ ಹೇಳಿದ ಅರ್ಥಗಳು

ಜ್ಞಾನಯಜ್ಞ, ಮಹಾಪ್ರಸಾದ, ಶೇಣಿ ರಾಮಾಯಣ ಹಾಗೂ ಶೇಣಿ ದರ್ಶನಗಳಲ್ಲಿ ಸಂಗ್ರಹಗೊಂಡಿವೆ. ಶೇಣಿಯವರಿಗೆ ಮಂಗಳೂರು ವಿಶ್ವವಿದ್ಯಾನಿಲಯವು 2005ರಲ್ಲಿ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

ಇವರು ರಚಿಸಿದ ಪ್ರಸಂಗಗಳು: ಉದ್ದಾಲಕ ಅಥವಾ ವಿಷಮ ದಾಂಪತ್ಯ, ಕವಿರತ್ನ ಕಾಳಿದಾಸ, ತುಳುನಾಡ ಸಿರಿ (ಮಲ್ಪೆ ರಾಮದಾಸ ಸಾಮಗರ ಜೊತೆ) ಪಂಚವಟಿ (ಪೂರ್ವಾರ್ಧ), ಬ್ರಹ್ಮರ್ಷಿ, ಭಸ್ಮಾಸುರ ಮೋಹಿನಿ, ಮಣಿಕಂಠ ವಿಜಯ, ಮಧ್ಯಮ ವ್ಯಾಯೋಗ, ಮಹಾ ಕ್ಷತ್ರಿಯ, ಮೇಘನಾದ ವಿಜಯ, ರಾಮಾಂಜನೇಯ, ಶಂಕರ ವಿಜಯ, ಶಂಭೂಕ ವಧೆ, ಶರವು ಕ್ಷೇತ್ರ ಮಹಾತ್ಮೆ, ಶ್ರೀ ಕಣಿಪುರ ಕ್ಷೇತ್ರ ಮಹಾತ್ಮೆ, ಶ್ರೀಮತಿ ಪರಿಣಯ, ಸತೀ ಅನಸೂಯ.

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ಶಾರ್ದೂಲ ವಿಕ್ರೀಡಿತ ವೃತ್ತಂ**

ಆವಂ ಶೈವಸಮಾಜದಿಂದೆ ಶಿವನೆಂಬಾಧಿಕ್ಯದಿಂ ಪೂಜೆಯಂ |
ಆವಂ ವೈಷ್ಣವರಿಂದೆ ವಿಷ್ಣು ನಿಜವೆಂದಾವಾಗಳುಂ ಸೇವೆಯಂ |
ಆವಂ ಜ್ಞಾನಿಗಳಿಂದಲಾತ್ಮನೆನಿಸುತ್ತಂ ಧ್ಯಾನಮಂ ಕೈಗೊಳು |
ತ್ತಾವಂ ಲೋಕವ ಕಾವನಾ ಕಣಿಪುರೇಶಂ ಪಾಯಲೆಮ್ಮಂ ಸದಾ || ೧ ||

**ವಾರ್ಧಕ ಷಟ್ಪದಿ**

ಸಿಂಧುಶಯನನ ಚರಣನಳಿನಮಧು ಕುಡಿದು ಘನ |
ಸಿಂಧುವನು ಕಡೆದು ನಿಜಸಂಪದವ ಪಡೆದು ಸುಖ |
ಸಿಂಧುವಿನೊಳುಲ್ಲಾಸದಲಿ ಭೋಗನೌಕೆಯನ್ನೇರಿ ಸುರಭಟರ ಸೇನಾ ||
ಸಿಂಧುವಬ್ಬರಿಪ ರವ ನಂಬಿ ಮೈದುಂಬಿ ಭವ |
ಸಿಂಧುಕುಂಭಜನ ನೆನೆದೊಂದು ಮಧುಮಾಸದೊಳು |
ಸಿಂಧೂರರಥ ರಾಜಿಸುತಲೊರೆದ ಸಂತೋಷದಾವೇಶದಾದೇಶವಾ || ೨ ||

**ನಾಟಿ - ಝಂಪೆ**

ಎಂಬೆನೇನೀ ಸಿರಿಯು ತುಂಬೆ ಕಾರಣ ದೈವ |
ದಿಂಬೆಯಲ್ಲದೆ ಬೇರೆ ನಂಬೆ ತರವುಂಟೇ ||
ರಂಭೆಯೂರ್ವಶಿ ಹೊನ್ನಗೊಂಬೆಗಳ ಸೇವೆ ಕೈ |
ಗೊಂಬೆನನುದಿನದೆ ಸೊದೆಯುಂಟೆ ಹರಿದಯದೆ || ೩ ||

ಬಲಿಯ ಬಲುಬಲುಹ ಬಲೆ ಬಲಿದಿಳಿಸುತೊಲಿದಿಲ್ಲಿ |
ಬಲಿಗಳೆನಿಸುತಲೆಮ್ಮ ಬಳಗ ಬೆಳಗಿಸುತ ||
ಸಲಹಿದನು ಹರಿ ಸೂಕ್ತ ಸಲಹೆಯೀಯುತ ಸಕಲ |
ಸಲಕರಣೆ ಸೇರಿ ಭಲೆ ಬೆಲೆಯೇರಿತೆಮಗೆ || ೪ ||

ಖಲರ ಸಮರದ ಭ್ರಾಂತಿಯಳಿದು ಧರೆಯೊಳು ಶಾಂತಿ |
ನೆಲಸಿತಹ ಮುಂದಿನ್ನು ಕ್ರಾಂತಿರವವಿಲ್ಲ ||
ನಲಿಯಿರಾನಂದತುಂದಿಲರೆಲ್ಲರೆನುವಂತೆ |
ಗೆಳೆಯರೆ ವಸಂತನದೊ ಕಳೆಯೇರುತಿಹನು || ೫ ||

ಇಂದು ನಾವದರಿಂದಲಂದದೊಳು ರಂಭಾದಿ |
ಸುಂದರಿಯರಿಂದೊದಗಿ ನಂದನಕೆ ಸಾಗಿ ||
ಹೊಂದಿ ಸೊಗವುಣಲುಬೇಕೆಂದುದಿಸಿತೊಂದಾಸೆ |
ಯೆಂದೊರೆಯೆ ಚಿತ್ರರಥನೆಂದ ಸಂಭ್ರಮದೆ || ೬ ||

**ಜಂಜೂಟಿ - ರೂಪಕ**

ನುಡಿಯು ಸಹಜ ದೇವರಾಜ ಕೂಡಿ ಸುರವ್ರಜ |
ತಡೆಯದೀಗ ಸಾಗಿ ಬೇಗ ಪಡೆವ ಬಲು ಸೊಗ || ೭ ||

ಆದರೊಂದು ನುಡಿವೆನಿಂದು ಕೇಳ್ ಕೃಪಾಸಿಂಧು |
ಮೋದವಧಿಕವಾಗೆ ಬೇಕಾ ಕುಸುಮಸಾಯಕ || ೮ ||

ಕರೆಸು ಸ್ಮರನ ಬರಲಿ ಮದನನಿಲ್ಲಿ ತಕ್ಷಣ |
ಹರುಷಮನದಿ ಮಗುಳೆ ವನದಿ ನೆರೆವ ಕುಶಲದಿ || ೯ ||

**ಕಂದ**
ಭಲೆ ರಸಿಕಾಗ್ರೇಸರ ನಾಂ |
ತಲೆದೂಗಿದೆ ನಿನ್ನ ಸೂಕ್ತ ಸಲಹೆಗೆನುತ್ತಂ ||
ಬಲರಿಪು ದೂತರನಟ್ಟಲ್ |
ನಲವಿಂ ಸುಮಬಾಣ ಬಂದನಿಂದ್ರನ ಪೊರೆಗಂ || ೧೦ ||

**ಮಧ್ಯಮಾವತಿ – ಅಷ್ಟ (ಚಾಪು)**
ತೋಷದೊಳಮರನಾಥ | ಆಗಮನ ವಿ |
ಶೇಷವಾಯ್ತೆಂದೆನುತ ||
ಶ್ರೀಶಕುಮಾರ ರತೀಶ ಮಂಡಿಸುತ ಸು |
ಖಾಸನದೊಳು ಮಾರ್ಗಾಯಾಸವ ಕಳೆಯೆಂದ || ೧೧ ||

ಮೆರೆವ ವಸಂತೋತ್ಸವ | ವೀ ದಿನದೊಳಾ |
ಚರಿಸಲು ಬೇಕೆನುವ ||
ಸ್ಥಿರನಿರ್ಧಾರವನು ಗೈದಿರುವೆನೀ ಶುಭಕಾರ್ಯ |
ನೆರವೇರಿಸಲು ನೀನು ನೆರವಾಗಬೇಕೆಂದು || ೧೨ ||

ನೀನಿಲ್ಲದಿರಲಿಕಿಂಥ | ಸಂಧಿಯೊಳ್ಮೃದ |
ವಿನ್ನಿಲ್ಲ ರತಿಯ ಕಾಂತ ||
ಮಾನಿಸುತೆನ್ನ ನಿಧಾನವ ನೀನಗ್ರ |
ಸ್ಥಾನವ ವಹಿಸಿ ಮಹಾನಂದವೆಮಗೀಯೊ || ೧೩ ||

**ಕಂದ**
ಎನೆ ಕೇಳ್ದಾ ಕುಸುಮಶರಂ |
ಘನ ಹರ್ಷವನಾಂತು ನಾಕಪಾಲನೊಳೆಂದಂ ||
ಅನಿಮಿಷರರಸನೆ ನಿನ್ನಯ |
ಮನವಾಂಛಿತಕಹಿತಭಾವವಿಲ್ಲೆನಗೆನುತಂ || ೧೪ ||

**ಕಲ್ಯಾಣಿ – ಅಷ್ಟ (ಚಾಪು)**
ಅದರಿಂದ ನಂದನವ | ಸೇರಲ್ಕೆ ವಿ |
ಬುಧಜಾಲ ಸಹಿತೈದುವ ||ಪಲ್ಲವಿ ||
ವಿಧುಮುಖಿಯರ ಮೇಳವೊದಗಲಾವ್ ಬಹಳ |
ಮುದದಿಂದ ಗೈವ ಸ್ಫೂರ್ತಿಯೊಳೀಯುತ್ಸವವನು || ಅ.ಪಲ್ಲವಿ ||
ಎನಲತಿ ಸಂತೋಷದನುಭವದಲ್ಲಿ ಸು |
ಮನಸರರಸ ಸುರ ಗಣಿಕೆಯರ ||
ಗಣವನು ನೆರಹಿ ಮೇಣನಿಮಿಷರನು ಕೂಡಿ|
ಮನಸಿಜನೊಡಗೊಂಡೈತರುತಲಿಂತೆಂದನು || ೧೫ ||

**ಕಮಾಚ್ - ರೂಪಕ**
ಮೀನಕೇತ ನೋಡು ನೀನು |
ಈ  ನವೀನವನದ ಸೊಬಗ ||ಪಲ್ಲವಿ ||
ಸಂಪಗೆಗಳ ಕಂಪು ಬಹಳ |
ಪೆಂಪು ಜಾಜಿ ಗುಂಪು ಮೆರೆವ ||
ಸೊಂಪು ನೋಡುತಿಂಪುಗೂಡಿ | ಹಾಡಿ ಹಾರುವಾರಡಿಗಳ ||೧೬ ||

ಇನಿಯನ ನವವಧುವು ಸೇರಿ |
ಕುಣಿವ ತೆರದಿ ಸರಸವೇರಿ ||
ಘನವಸಂತನೊಡನೆ ಬೆರೆಯು | ತಾಡುತಿರುವ ಪ್ರಕೃತಿ ಸತಿಯ || ೧೭ ||

ಭೋಗನೀಗಿ ಪರರಿಗಾಗಿ |
ತ್ಯಾಗಿ ದುಡಿಯುವಂತೆ ಜಲಜ ||
ಬಾಗಿ ಕೊಡುತಲಿಹುದು ಮಧುರ | ಮಧುವ ತುಂಬಿ ತುಂಬಿಗಳಿಗೆ || ೧೮ ||

ಉತ್ತಮರ ಸಂಪತ್ತು ಜಗದಿ |
ಸ್ವಾರ್ಥರಹಿತವಿಹಿತವೆನುತ ||
ಹೊತ್ತು ತಮ್ಮೊಳಿತ್ತು ಫಲವ | ಕುಜದ ರಾಜಿ ರಾಜಿಪುದನು || ೧೯ ||

**ವಾರ್ಧಕ (ಅರ್ಧ)**
ಇಂತು ಬಣ್ಣಿಸುತಲಾರಾಮದೆಡೆಗೈದಿ ರತಿ |
ಕಾಂತನಂ ಮಂದಾರ ಮಾಲಿಕೆಯನಿಕ್ಕಿ ಸುರ |
ತಿಂಥಿಣಿಯ ಮಧ್ಯದೊಳು ಪೀಠಕೇರಿಸಲಿಂದ್ರನಾನಂದರವ ಮೊಳಗಲು || ೨೦ ||

**ಕಂದ**
ಬಿಡುಜಡೆಯಾಡುವ ಬೆಡಗಿಂ |
ತೊಡಗೆ ಸುರಸ ಗಾನ ನರ್ತನಂಗಳ ಸತಿಯರ್ ||
ಬಿಡದಲ್ಲಿಗೆ ನಾರದ ಮುನಿ |
ಮೃಡ ಪರ್ವತರೈದಲಿಂದ್ರ ಮುನಿದಂ ಮನದೊಳ್ || ೨೧ ||

**ಅಠಾಣ - ಝಂಪೆ**
ಏನು ಬಂದುದೊ ಸ್ವಾರಿ ಮೌನಿಗಳದೀಸಾರಿ |
ಆನಂದದಿರಕೆ ತಡೆಯಾಗುತೊಂದಾಗಿ || ಪಲ್ಲವಿ ||
ಬಂದರೊಳಿತಾಯ್ತು ಬರಲೆಂದು ಸನ್ಮಾನಿಸಲು |
ಮುಂದೆ ಹರಟದೆ ತಾವು ಸುಮ್ಮನಿಹರೆ ||
ಇಂದಿವರ ಗೊಡವೆ ಬೇಡೆಂದುದಾಸೀನ ಮನ |
ದಿಂದ ಲಕ್ಷಿಸದಿರಲು ಶಪಿಸದುಳಿಯುವರೆ || ೨೨ ||

ಆದುದಾಗಲಿ ಬಂದ ಯೋಗಿಗಳ ಕರೆದೀಗ |
ಸಾದರಾತಿಥ್ಯ ಮಾಳ್ಪುದೆ ವಿಹಿತವು ||
ಮೋದಗೊಳಿಸುತಲಿವರ ಬೇಗ ಕಳುಹುತ ಬಳಿಕ |
ಲೀದಿವಸದುತ್ಸವವ ಸಾಂಗವೆಸಗುವೆನು || ೨೩ ||

**ಕಂದ**
ಎಂದವರೆಡೆಗಾಗಮಿಸುತ |
ವಂದಿಸಿ ನಗುತೆಂದ ಬಾಹ್ಯರಂಗದೆ ಮುದವ ||
ನ್ನಂದದಿ ಪ್ರಕಟಿಸುತಲೆ ಯೋ |
ಗೀಂದ್ರರೆ ದಯಮಾಡಬೇಕು ನೀವೀಗೆನುತಂ || ೨೪ ||

ಎಂದುದ ಕೇಳುತಲುಭಯ ಮು |
ನೀಂದ್ರರು ದಯಮಾಡಬೇಕೆನ್ನುವೆ ಸಾಜಂ ||
ಮುಂದಕೊ ಹಿಂದಕೊ ನುಡಿ ನೀ |
ನಿಂದೆಮಗೆನುತಿಂತು ಕೋಪ ಪೆರ್ಚಲ್ಕೆಂದರ್ || ೨೫ ||

**ಕೇದಾರಗೌಳ - ಝಂಪೆ**
ತಾಳಲೇನಿದು ಗರ್ವವ | ಮಘವ || ಪಲ್ಲವಿ ||
ತಾಳಿ ನೀಂ ಮದವ ಮುನಿಪಾಲನಿದಿರೊಳು ಮೊದಲು |
ಹಾಳಾದ ಕಥೆಯ ನೆನಪಿಲ್ಲದಂತಿರುವೆಯಲ || ೨೬ ||

ಬಂದೊಂದು ಗಳಿಗೆಯೇ ನಿಂದು ಮಾತಾಡಿಸಲು |
ಸಂಧಿಸಿತೆ ಕೆಡುಗಾಲವಿಂದು ಪುನರಪಿ ನಿನಗೆ || ೨೭ ||

ಸುರೆಯ ಸೊರ್ಕೊ ಸ್ವರ್ಗದರಸೆಂಬ ಗರ್ವವೋ |
ಭರಿತ ಯೌವನಮದವೊ ಸಿರಿಯಿರ್ಪ ದರ್ಪವೋ || ೨೮ ||

ಒಲಿದೆವಾದರೆ ಪದುಳ ಮುಳಿಯೆ ಜಗವಿದಿರಲ್ಲ |
ಸುಲಭಕೋಪಿಗಳ ಬಗೆ ತಿಳಿಯದೇನೆಲೊ ಜೋಕೆ || ೨೯ ||

**ಭಾಮಿನಿ ಷಟ್ಪದಿ**
ಎಂದು ರೋಷಾವೇಶವನು ತಳೆ |
ದಂದು ಮುನಿಕುಲವಂದ್ಯಚರಣರು |
ಬಂದ ದಾರಿಯ ಪಿಡಿಯಲನುವಾಗಲ್ಕೆ ಸುರಪತಿಯು ||
ಹಿಂದಣ ಮನೋವೃತ್ತಿಯಳಿಯಲು |
ನೊಂದು ತನ್ನನು ತಾನೆ ಶಪಿಸುತ |
ಬಂದು ಯೋಗೀಶ್ವರರ ಕಾಲ್ಗಳ ಪಿಡಿದು ಪೇಳಿದನು || ೩೦ ||

**ಶಹನ - ಅಷ್ಟ (ಚಾಪು)**
ಏತಕೆ ಮನದೊಳು ಖಾತಿಯೆನ್ನೊಳು ಗುರು |
ನಾಥರೆ ಮನ್ನಿಸಿ ದಯೆಯಿರಿಸಿ ||
ಪ್ರೀತಿಯಿಂ ನಿಮಗೆ ನಾನಾತಿಥ್ಯ ಗೈವ ಕೃ |
ತಾರ್ಥತೆಯನು ನೀಡಬೇಕೆಂದು ಬೇಡುವೆ || ೩೧ ||

ಚರಣ ಸೇವಕರು ಗೈದರು ತಪ್ಪನೊಮ್ಮೆಗೆ |
ಸರಿದಾರಿದೋರುವರಲ್ತೆ ನೀವು ||
ಅರಿಯದೆ ಬಂದೆನ್ನ ದುರಿತವ ಮನಸಿನೊ |
ಳಿರಿಸದೆ ಹರಸಿ ಕಾಪಾಡಿರಿ ಬನ್ನಿರಿ || ೩೨ ||

**ಕಂದ**
ಬಿಡು ಸಾಕೀ ದುರ್ವಿನಯಂ |
ನಡೆಯುವೆವಾವಿಂದೆನುತ್ತೆ ಮುನಿಗಳು ಹಟಮಂ ||
ಪಿಡಿಯಲ್ ಕಂಡಾ ಮದನಂ |
ನುಡಿದಂ ಸುರಜಾಲಪಾಲಕಂಗೆ ನಗುತ್ತಂ || ೩೩ ||

**ಜಂಜೂಟಿ - ಏಕ**
ಏತಕೆ ನಿನಗೀ ಭೀತಿಯು ಸುಮನಸ |
ನಾಥನೆ ಪಾಮರರಂದದೊಳು ||
ಈ ತಾಪಸಿಗಳ ಖಾತಿಯ ಮಾತಿಗೆ |
ಕಾತರವೀತೆರದೇತರದಯ್ಯಾ || ೩೪ ||

ಹೋಗಲಿವರು ಸುಸ್ವಾಗತವೇಕೆ ಬೈ |
ರಾಗಿ ಜನರಿಗಿಲ್ಲೇನಿಹುದು ||
ಆಗುವುದೆಲ್ಲವದಾಗಲಿ ಬಳಿಕೀ |
ಜೋಗಿಗಳಿಂದೆನೆ ಮುನಿಗಳು ಮುನಿಯೆ || ೩೫ ||

**ಕಾನಡ - ರೂಪಕ**
ಏನನಾಡಿದೆ | ಮದದೆ || ಪಲ್ಲವಿ ||
ಹೀನ ಮೀನಕೇತ ನಿನ್ನ ನೀನು ತಿಳಿಯದೆ ||
ಏನನಾಡಿದೆ || ಅನು ಪಲ್ಲವಿ ||
ಹರನ ಫಾಲನೇತ್ರದಿಂದ |
ಉರಿದು ಜಗಕೆ ಮರಳಿ ಬಂದೆ ||
ನರಕಕಿಳಿಸೆ ಜೀವಿಗಳನು |
ಪರಮ ಪಾಪಿ ಕಾಮ ನೀನು || ಏನನಾಡಿದೆ || ೩೬ ||

ನಿನ್ನ ತಾಯಿತಂದೆ ತಮ್ಮ |
ಹೊಂದಿದವರ ಪೊರೆದರಮಮ ||
ನಿನ್ನ ಭಜಕರೆಲ್ಲ ಮಣ್ಣ |
ತಿನ್ನದುಳಿಯಲಿಲ್ಲವಧಮ ||ಏನನಾಡಿದೆ || ೩೭ ||

**ಕಂದ**
ಎಂದಾ ಸ್ಮರನಂ ಜರೆಯುತೆ |
ಬೃಂದಾರಕರಾಳ್ದನಿಂಗೆ ಪೇಳ್ದರ್ ನಿನ್ನ ||
ನ್ನಂದಾಮುನಿ ಸತಿ ಕಥೆಯಿಂ |
ನಿಂದ್ಯಾಕೃತಿ ಗೈದ ನೀಚನಿವನೆಂದರಿಯಾ || ೩೮ ||

**ಭೈರವಿ - ಝಂಪೆ**
ತಿಳಿದು ನೀನಿವಗೆ ಮನವೊಲಿದಗ್ರಪೀಠವನು |
ಸಲಿಸುವುದೆ ನಿನ್ನ ಮನದೊಲವಿದು ವಿಚಿತ್ರ || ೩೯ ||

ವಾನರಗೆ ತಿಳಿದಪುದೆ ಮಾಣಿಕ್ಯದಾಧಿಕ್ಯ |
ವೀನೀಚನರಿದಪನೆ ಸ್ಥಾನಮಾನಗಳ || ೪೦ ||

ಪೇಳೆಮ್ಮೊಳೊಮ್ಮೆ ಸುರಪಾಲ ವರ ಮಂದಾರ |
ಮಾಲಿಕೆಯ ಮೂರ್ಖ ಭಲ್ಲೂಕನೀತನಿಗೆ || ೪೧ ||

ಮಾನಹೀನನಿಗೆ ಸನ್ಮಾನ ನಡೆವೆಡೆಯೊಳೆಮ
ಗಿನ್ನೇಕೆ ಮಾತೆನುತ ಮೌನಿಗಳು ತೆರಳೆ || ೪೨ ||

**ಕಂದ**
ಮೊದಲಾನೆಣಿಸಿರ್ಪಂದದೆ |
ಮುದಮಂ ಕೆಡಿಸುತ್ತೆ ಪೋದರಲ್ತೆ ಮುನೀಂದ್ರರ್ ||
ವಿಧಿ ವಿಧಿಸಿದೆಯ್ಕೆ ಹಾಯ್ ದು |
ರ್ವಿಧಿಯಿಂತೆನುತಂ ಸುರೇಂದ್ರನುಸುರಲ್ ಮದನಂ || ೪೩ ||

**ಕಲ್ಯಾಣಿ - ರೂಪಕ**
ಯೋಗಿಜನಗಳೆನ್ನ ನೋಡಿ |
ಹೀಗೆ ತೆಗಳುತಿಹುದು ರೂಢಿ ||
ನಾಗರಥನೆ ಬರಿದೆ ಮನದೆ |
ನೀನದಿಂತು ಮರುಗಬಹುದೆ || ೪೪ ||

ಮಘವ ಲಾಲಿಸಿವರ ನೋಡಿ |
ಜಗದಿ ಜನರು ಬೆಟ್ಟುಮಾಡಿ ||
ನಗುವ ತೆರದಿ ಗೈವೆನಿವರ |
ಮೊಗಕೆ ಮಂಗಳಾರತಿಯನು || ೪೫ ||

ಇಂದಿನಿಂದಲಿವರ ಬಿಡದೆ |
ಹಿಂದೆ ನಡೆದೆ ಕೆಡಿಪೆ ದಿಟದೆ ||
ಬಂದು ನಾವು ನೆರೆದ ಕಾರ್ಯ |
ಮುಂದೆ ಸಾಗಲಯ್ಯ ಬೇಗ || ೪೬ ||

**ಕಂದ**

ಎಂದೆನೆ ಸುರಸುಂದರಿಯರ್ |
ವೃಂದಾರಕ ವೃಂದ ಮೆಚ್ಚುವಂದಂ ಮುದದಿಂ ||
ದಂದುಗೆ ಜಣಿರೆನ್ನುವ ಬೆಡ |
ಗಿಂದೆಲ್ಲರ್ ಪಾಡಿಕೊಡಿಯಾಡಿದರಾಗಳ್ || ೪೭ ||

**ಕೇದಾರಗೌಳ - ಅಷ್ಟ (ಚಾಪು)**

ಅಂದವಾಗಿರಲು ದೇವೇಂದ್ರನುತ್ಸವದಂತ |
ಕೆಂದನು ಭಲ ಭಲರೆ ||
ಮಂದಗಾಮಿನಿಯರೆ ಸುಂದರಿಮಣಿಯರೆ |
ಚಂದವಾಯ್ತೀಗ ಖರೆ || ೪೮ ||

ಸಂಗೀತಾಮೃತ ಸಾರ ಶೃಂಗಾರರಸ ಪ್ರವಾ |
ಹಂಗಳ ಸಂಗಮದಿ ||
ಹಿಂಗಿದುದಾ ಮುನಿಪುಂಗವರೆಸಗಿದ |
ಭಂಗದ ವ್ಯಥೆ ಮನದಿ || ೪೯ ||

ಇಂದಿನುತ್ಸವಕೆಂದು ಬಂದು ನಮ್ಮನು ಮಹಾ- |
ನಂದವಗೊಳಿಸಿರುವ ||
ಕಂದರ್ಪನಿಗೆ ಋಣಿಯಿಂದಾನಾಗುವೆನೆನ |
ಲಂದು ಮುಗಿದುದುತ್ಸವ || ೫೦ ||

**ಕಂದ**

ಮನಸಿಜನಾ ಮುನಿವರರೊಳ್ |
ತನಗಿಹ ಹಗೆ ತೀರ್ಚಲೆಂದು ಸಾಗಲ್ ಮಘವಂ ||
ವನಿತೆಯರೊಡಗೂಡುತ ಸುರ |
ರನುಸರಿಸುತಲಿರೆ ನಿಜಾಲಯಂ ಸೇರಿರ್ದಂ || ೫೧ ||

**ವಾರ್ಧಕ ಷಟ್ಪದಿ**

ಶ್ರೀರಾಜಪದಜಲಜ ಭೃಂಗಮನು ರಾಜಕುಲ |
ವಾರಾಶಿರಾಜ ದಿವರಾಜತೇಜವಿರಾಜ |
ಧಾರಿಣೀರಾಜ ನತಸುರಭೂಜ ದಿವಿಜ ಪೂಜಾನಿರತ ಸುಜನ ಪೂಜ್ಯ ||
ಚಾರು ವೈಷ್ಣವರೋಜ ನಿಜಭುಜಬಲಾನ್ವಿತನು |
ದಾರ ಮೃಗರಾಜ ಪೀಠದೆ ರಾಜಿಸಿದನೇಕ |
ವೀರನೆನೆಲಂಬರೀಷ ವಿಶೇಷ ತೋಷಮಾನಸನಾಗುತೊಂದುದಿವಸ || ೫೨ ||

**ಮಾಲಿಕೆ - ಝಂಪೆ**
ಮಂತ್ರಿ ಕೇಳ್ ದೂರ್ವಾಸರಿಂತಾಗೆ ಬಳಿಕಲೆ |
ಮ್ಮಂಥ ಭವಿಗಳ ಕಥೆಯನೆಂತು ಬಣ್ಣಿಪೆನು || ಪಲ್ಲವಿ ||
ಮರದೊಳೆಣೆಯಾಗಿ ಕುಳಿತಿರುವ ಕ್ರೌಂಚಗಳುಪಮೆ |
ಪರಮಾತ್ಮ ಜೀವಾತ್ಮರಿರುವ ಬಗೆಗೈಸೆ ||
ಅರಿಯದದರಲ್ಲೊಂದು ದೊರೆತ ಫಲ ಮೆಲುತಲಿರೆ |
ಪರಿಕಿಸುತಲುಳಿದ ಖಗ ಬರಿದೆ ಕುಳಿತಿಹುದು || ೫೩ ||

ಆರೆಸಗಲೇನು ಸಂಸ್ಕಾರವಾ ಜೀವವನು |
ದೂರ ಸರಿಸುತ ಶತಶರೀರ ದೊರಕಿಸಲು ||
ಮಾರನಯ್ಯನ ಮರೆದು ಮೂರು ಗುಣಗಳ ಬೆರೆದು |
ಮಾರುತಿಹ ವಿಷಯಸುಖ ಪೂರಣಕೆ ತನ್ನ || ೫೪ ||

ಕನಸಕಂಡಳುವ ಶಿಶುವನು ತಾಯಿಯೆಚ್ಚರಿಸಿ |
ಮನದಳುಕನಳಿಪಂತೆ ವನಜಾಕ್ಷಿ ನಿಜದಿ ||
ಅನಿಶ ಯೋಗಕ್ಷೇಮವನು ವಹಿಸುತಿವನ ಬಂ |
ಧನ ಕಳೆವ ತತ್ಪಾದವನಜದಳಿಯಾಗೆ || ೫೫ ||

ಅವನಿತ್ತ ಸಿರಿಸಂಪದವ ಜನ್ಮ ಕರ್ಮವಿಡಿ |
ದವನ ಸೇವಿಪನಾವನವನೇ ಸುದೈವಿ ||
ಸುವಿಚಾರ ಕೇಳ್ವ ಜನನಿವಹವಿಂತಿಹುದೆ ಪೇ |
ಳುವೆಯ ನೀನೆನೆ ಮಂತ್ರಿ ಸವಿನಯದೊಳೆಂದ || ೫೬ ||

**ಬೇಗಡೆ - ಅಷ್ಟ (ಚಾಪು)**
ಎಂತು ಬಣ್ಣಿಪೆನದನು | ಭೂಪತೆ ಬಲು |
ಸಂತಸದೊಸಗೆಯಾನು || ಪಲ್ಲವಿ ||
ಸಂತತವು ಧೀಮಂತ ಭೂಸುರ |
ಸಂತತಿಯು ಮಾಕಾಂತನಲ್ಲೇ ||
ಕಾಂತ ಭಕ್ತಿಯನಾಂತು ಸುಖದಿ ಸ |
ಮಂತು ಮನದಲಿ ಶಾಂತವಾಗಿಹು || ದೆಂತು || ೫೭ ||

ಭುಜಬಲದಿ ರಿಪುಗಜಮೃಗೇಂದ್ರರು |
ನಿಜವೆನಲು ಭೂಭುಜರ  ಸೇನಾ ||
ವ್ರಜವು ಮೆರೆವುದು ಸುಜನಕುಲಸುರ |
ಕುಜವದೆನಿಸುತ ವಿಜಯಭರದೊಳ || ಗೆಂತು || ೫೮ ||

ಮೋಸ ಪುಸಿ ಬಹಳಾಸೆಗಳು ಲವ |
ಲೇಶವಿಲ್ಲದೆ ವೈಶ್ಯರೆಲ್ಲ ವಿ ||
ಲಾಸವಿಭವ ವಿಶೇಷದಿಂ ಸಂ |
ತೋಷದಿಂದಲಿ ವಾಸಿಸುವರಿದ || ನೆಂತು || ೫೯ ||

ಧಾತ್ರಿಗಿದು ಸಂಪತ್ತು ದಿಟವೆನ |
ಲುತ್ತು ಬಿತ್ತಿ ಸಮಸ್ತ ಕೃಷಿಯ ||
ನ್ನುತ್ತಮದೆ ಗೈಯುತ್ತ ಕಾರ್ಯಾ |
ಸಕ್ತಕಾರ್ಮಿಕ ಮೊತ್ತ ಮೆರೆವುದ || ನೆಂತು || ೬೦ ||

**ಕಂದ**

ಜನಗಣ ಗುಣದಿಂ ಪೆರ್ಚಿಹು |
ದೆನುತಂ ನಿಜ ಮಂತ್ರಿ ಪೇಳೆ ಸಂತಸವೆತ್ತಾ ||
ಜನಪತಿಯಿರಲಿತ್ತಲ್ ತ |
ತ್ತನುಭವೆ ಶ್ರೀಮತಿ ಸರಾಗದಿಂದುಪವನದೊಳ್ || ೬೧ ||

ಪೂಜಿಸಿದಳ್ ಹರಿಪಾದ ಸ |
ರೋಜವ ದಯೆಮಾಡುತ್ತೆನ್ನ ನಿಜಸತಿಯೆನಿಸು ||
ತ್ರೀಜಗದಿಂದೆತ್ತುತೆ ಪೊರೆ |
ರಾಜೀವೇಕ್ಷಣ ಸುಪರ್ಣವಾಹನನೆನುತಂ || ೬೨ ||

**ಬೃಂದಾವನ ಸಾರಂಗ - ರೂಪಕ**

ಮಾಯಾಮಯ ಲೋಕಕಿಳಿಸಿ |
ಕೈಯ ಬಿಡಲು ಸರಿಯೆ ಹರಿಯೆ ||
ಆಯಾಸವನೀಯದೀಗ |
ಕಾಯೊ ಸರಸಿಜಾಯತಾಕ್ಷ || ೬೩ ||

ಉರಿವ ಬೆಂಕಿಯೆನುವ ತಿಳಿವ |
ದಿರದ ಹಸುಳೆಯದರ ಮುಟ್ಟಿ ||
ಬೆರಳು ಸುಡಿಸಿ ಕೂಗಿ ಕರೆಯು |
ತಿರಲು ಕೇಳದೇನೊ ಸ್ವಾಮಿ || ೬೪ ||

ದೇಹಧರ್ಮವಲ್ಲವೇನು |
ದಾಹ ವಿವಿಧ ವಿಷಯಗಳಲಿ ||
ಮೋಹಬದ್ಧಳಾದೆನೆಂದು |
ಸ್ನೇಹ ಬಿಡಲು ಬಹುದೆ ನೀನು || ೬೫ ||

ಪಾದ ಬಿಡೆನು ನಿನ್ನನುಳಿಯ |
ಲೀಧರಣಿಯ ಪುರುಷರೆಲ್ಲ ||
ಸೋದರರ ಸಮಾನರೆನಗೆ |
ಮಾಧವಾ ಪ್ರಸೀದ ಮಣಿವೆ || ೬೬ ||

ಶರಧಿ ಕುಲವ ಪರಿಕಿಸುತಲಿ |
ತೊರೆಯ ತೊರೆಯುತಿಹುದೆ ದೊರೆಯೆ ||
ಪರುಷ ಲೋಹದಲ್ಲಿ ಗುಣವ |
ನರಸುವುದೆ ಕೃಪಾಂಬುನಿಧಿಯೆ || ೬೭ ||

ಹಣ್ಣು ಕತ್ತಿಗಳನು ನಿನ್ನ |
ಸನ್ನಿಧಾನಕರ್ಪಿಸಿರುವೆ ||
ನಿನ್ನು ತೋರಿದಂತೆ ಮಾಡು |
ಪನ್ನಗೇಂದ್ರಶಯನ ಶೌರೆ || ೬೮ ||

**ವಾರ್ಧಕ ಷಟ್ಪದಿ**
ಇಂತು ಪೂಜಿಸಿ ನಿಲಯಕಾಗಿ ಪೊರಟಿರಲು ಭೂ |
ಕಾಂತನಂ ಕಾಂಬುದಕೆ ಬರುವ ನಾರದನ ತ |
ತ್ಕಾಂತೆಯಭಿವಂದಿಸುತ ಹರಕೆಗೊಂಡೈದುತಿರಲಿತ್ತಲಂದಿನ ವೈರದಿ ||
ಕಂತು ತನಗೀಸಮಯ ಸೂಕ್ತವೆನ್ನುತ ಮರೆಗೆ |
ನಿಂತು ಪೂಗಣೆ ಪೂಡಲಚ್ಚರಿಯ ತಾಳಿ ತ |
ನ್ನಂತರಂಗದೊಳು ವಿರಹಾಗ್ನಿ ಹೊಗೆಯಾಡಲಾ ಗೀರ್ವಾಣಮುನಿಯೊರೆದನು || ೬೯ ||

**ಕಾಮವರ್ಧಿನಿ - ರೂಪಕ**
ಮನವೇನಿದು ಮರುಳಾದುದು |
ವನಜಾನನೆಯನು ನೋಡಲು || ಪಲ್ಲವಿ ||
ಅನಿಮೇಷರ ಪುರಸತಿಯರ | ಘನರೂಪಕೆ ಬೆಲೆಕಾಣದೆ || ಮನ || ಅ.ಪಲ್ಲವಿ ||
ಜಲಜಾಕ್ಷನ ಪದಸಾರಸ |
ನೆಲೆಯಾಗಿಹ ನಿಜಮಾನಸ ||
ನಿಲಯವನೀ ಮನಮೋಹಿನಿ |
ಸೆಳೆದೀ ದಿನದೀ ಛಲದಿಂದಲಿ ತಾನಾವರಿಸಿಹಳಹ || ಮನ || ೭೦ ||

ಪರಮಾತ್ಮನ ಗುಣಗಾನವ |
ನುರೆ ಮಾಡುವ ರಸನೇಂದ್ರಿಯ ||
ತರಹರಿಸುವುದೀಕೆಯೊಡನೆ |
ಸರಸಾಲಾಪಾ ಸತತವೆಸಗುತ್ತಿರಬೇಕೆನ್ನುತ || ಮನ || ೭೧ ||

ವಿಧಿತಾತನ ಮೃದುಭಾಷಣ |
ಮುದದಿಂದಾಲಿಪ ಕಿವಿಗಳು ||
ಚದುರೆಯೊಲಿದು ನಲಿದಾಡುವ |
ಮಧುರಾವಚನಾಮೃತವಾ ಕುಡಿಯಲ್ಕವಕವಗೊಂಬುದು || ಮನ || ೭೨ ||

ಹರಿಯ ಪದವ ಪಿಡಿವ ದಿವ್ಯ |
ಕರಗಳು ಮುಂಬರಿಯುತಿಹುದು ||
ತರುಣಿಯಾಲಿಂಗನಕೆ ಬಯಸಿ |
ಸ್ಫುರಿಸುತ್ತಕಟಾ ಭರದೇ ಬಹಳ ಚೋದ್ಯವಿದಾದುದು || ಮನ || ೪ || ೭೩ ||

**ಹಿಂದೋಳ - ಝಂಪೆ**
ಇದು ಹರಿಯು ವಿಧಿಸಿರ್ಪ ವಿಧಿಯಲ್ಲದೆ |
ಬದಲಲ್ಲ ಬರಿದೆ ಬೇಗುದಿಯೇಕೆ ಮನದೆ || ಪಲ್ಲವಿ ||
ಇಂದು ನಾನೀಲೋಕಸುಂದರಿಯ ವರಿಸಲದ |
ರಿಂದಲೆನಗೋ ಜಗಕೊ ಪದುಳವಹುದು ||
ಎಂದಾತನೆಣಿಸಲದರಿಂದ ಮನಸೆಳಸಿತೀ |
ಚಂದ್ರವದನೆಗದಲ್ಲದೆನ್ನ ತಪ್ಪಲ್ಲ || ೭೪ ||

ಅನ್ಯಗರ್ಪಿತೆಯಾದ ಕನ್ನೆಗಳುಪಿದೆನೆ ಮೇಣ್ |
ಮುನ್ನೊರ್ವಳನು ತಂದು ಮರೆಯುತಿಹೆನೆ ||
ಅನ್ಯಾಯವೇನಿವಳನೆನ್ನ ಸತಿಯೆನಿಸೆ ನೃಪ |
ನನ್ನು ಕೇಳುವೆನೆಂದು ಬಂದನರಮನೆಗೆ || ೭೫ ||

**ಕಂದ**
ಸುರಮೌನೀಂದ್ರನ ಬರವ |
ನ್ನರಿತಾಗಳೆ ಭೂಮಿಪಾಲನಿಳಿದಾಸನಮಂ ||
ಸುರುಚಿರ ಮಹಿಮಾಕಾರ ಋಷಿ |
ವರನನಿದಿರ್ಗೊಂಡು ಪೂಜಿಸುತಲಿಂತೆಂದಂ || ೭೬ ||

**ವಿಜಯ ನಾಗರಿ - ಏಕ**
ಧನ್ಯನಾದೆನಾನಿಂದಿನ ದಿನದೆ |
ನಿನ್ನಾಗಮದೆ ಸನ್ಮಾನ್ಯ ತಪೋನಿಧೆ || ಪಲ್ಲವಿ ||
ಕಮಲಾಕ್ಷನ ಪದಕಮಲನಲಿವ ಹೃ |
ತ್ಕಮಲದೊಳೆಸೆಯುವ ಕಮಲಜ ಸಂಭವ || ಧನ್ಯನಾದೆ || ೭೭ ||

ಕರೆ ಭಕ್ತಿಯ ಮಳೆ ಹರಿಸರಿವಿನ ಹೊಳೆ |
ಯಿರದಂದದಿ ಕೊಳೆ ತೊಳೆಯುವೆನೀಗಳೆ || ಧನ್ಯನಾದೆ || ೭೮ ||

**ವಾರ್ಧಕ ಷಟ್ಪದಿ**
ಭಲರೆ ನೃಪತಿಲಕ ವಾಕ್ಚತುರತೆಗೆ ಮೆಚ್ಚಿದೆನು |
ತಲೆದೂಗಿದನು ಭಕ್ತಿ ನಮ್ರತೆಗಳಿಗೆ ತನ್ನ |
ನಿಲಯದೊಳು ಸುರಭಿಯಿರೆ ಹಾಲಿಂಗೆ ಗೊಡ್ಡಾಕಳಂ ಬಯಸಿದಂತೆ ಹರಿಯ ||
ಒಲುಮೆಯಾಧಿಕ್ಯದೊಳಗೆನ್ನಂತವರ ಬೆರಗು |
ಗೊಳಿಸಿರ್ಪ ನಿನಗೆ ಸುಜ್ಞಾನದ ಪಿಪಾಸೆಯೇಂ |
ತಿಳಿಯಲಂತಲ್ಲವೇತಕೆ ಬಂದುದೆಂಬುದರ ರೂಪಾಂತರವಿದೆಂಬೆನು || ೭೯ ||

**ಶಂಕರಾಭರಣ - ತ್ರಿಪುಟ (ಮಿಶ್ರ)**
ಧಾರಿಣೀಶ್ವರನೆ ನಾನು | ನಿನ್ನಾಸ್ಥಾನ |
ಸೇರಿದುದೇಕೆಂಬೆನು ||
ಆರವರ್ಜಿಸುತೆಂಟ ಹರಿದು ವಿ |
ಕಾರಗೊಳಿಪೈದರನು ಕಟ್ಟಿ ವಿ ||
ಚಾರಪೂರ್ವಕ ನಾಲ್ಕರಲಿ ನಿ |
ಸ್ಸಾರ ಮೂರೆಂದೆಣಿಸಿ ಮನದಲಿ || ೮೦ ||

ಆಶಿಸುತ್ತೊಂದರನು | ಸಾಧಿಸುತಲ |
ಭ್ಯಾಸಗಳೆಂಟರನು ||
ಕ್ಲೇಶ ಪಂಚಕವಷ್ಟಮದ ನಿ |
ಶ್ಶೇಷಗೊಳಿಸಿ  ಷಡೂರ್ಮಿಗಳ ಮೇ ||
ಣೇಷಣಾತ್ರಯ ತ್ರಿವಿಧ ವಾಸನೆ |
ನಾಶಿಸುತನಾನೇಕ ಭಾವದಿ || ೮೧ ||

ಹಲವು ಯತ್ನದಿ ಸಿದ್ಧಿಯ | ಸಿದ್ಧಿಸುತಲಿ |
ಕಳೆದೆ ಕಾಲವ ಕೇಳಯ್ಯ ||
ಫಲವದೇನಿನ್ನದನು ನುಡಿದೀ |
ಗಳಿಗೆ ಮನ ಬದಲಿಸಿತು ನಿನ್ನ ಮ ||
ಗಳಿಗೆ ಸೋತೆನು ಲಗ್ನಪದ್ಧತಿ |
ಗಳಿಗೆ ಸರಿಯಾಗೀವುದವಳನು || ೮೨ ||

**ವಾರ್ಧಕ ಷಟ್ಪದಿ**
ಅಚ್ಚರಿಯಿದಚ್ಚರಿಯು ನಿಮಗೆನ್ನ ಮೇಲಿರ್ಪ |
ಮೆಚ್ಚುಗೆಯೆ ನೀವ್ ಮನದಿ ನೆನೆಯಬಾರದುದ ನಿಂ |
ತುಚ್ಚರಿಸುವಂತೆಸಗಿತರರೆ ಸನ್ಯಾಸವೇ ಸನ್ಯಾಸದಲ್ಲಿ ನಿಮಗೆ ||
ಅಚ್ಯುತಗೆ ತನು ತೆತ್ತ ನೀವಿಂತು ನಮ್ಮನೊರೆ |
ಹಚ್ಚಲೆಳಸಿದಿರಲ್ಲದಿದು ಸತ್ಯವಹುದೆ ಹೇ |
ಸಚ್ಚರಿತ ಗುರುವೆ ಸಾಕೀ ಪರೀಕ್ಷೆಯದೆಂದು ಪೊಡಮಡಲು ಮುನಿ ನುಡಿದನು || ೮೩ ||

**ನಾಟಿ ಕುರುಂಜಿ - ಏಕ**
ನುಡಿ ದಿಟವಿದು ನೆಲದೊಡೆಯನೆ ಸುತೆಯನು |
ಕೊಡು ಮನಚಂಚಲಕೆಡೆಗೊಡದೆ ||
ಅಡವಿಯ ಬಡ ಕಿತ್ತಡಿ ನಾನೆಂಬುವ |
ತಡೆಯುಂಟಾದರೆ ನುಡಿಯಲು ನಡೆವೆ || ೮೪ ||

ಪೇಳುವರೇ ಮುನಿಪಾಲರೆ ಹೀಗೆ |
ಬಾಲೆಯ ನೀವ್ ವರಿಸಲು ಜಗದಿ ||
ಮೇಲುಮೆಯೊಳು ಸರಿಯಾಳುಗಳಾರು ಸು |
ಶೀಲೆಯನೀವೆನು ತಮಗತಿ ಹಿತದಿ || ೮೫ ||

**ವಾರ್ಧಕ ಷಟ್ಪದಿ**
ಧರೆಯಧಿಪ ಕೇಳಾದರೊಂದುಂಟು ಮಾತೆಯರಿ |
ಗಿರುವುದಧಿಕಾರ ಮಕ್ಕಳ ಮದುವೆಯೊಳು ಸತಿಯೊ |
ಳರುಹಿ ನೀನೊಪ್ಪಿಸದೆ ಸುತೆಯನೀವುದದೆಂತೆನುವ ಮುನಿಗೆ ನೃಪನೆಂದನು ||
ಒರೆಯಳಾಕ್ಷೇಪವನ್ನಾಕೆ ಹೆಚ್ಚೇಕೆ ಸ |
ದ್ವರನೆ ಸುಕುಮಾರಿಗಾಗಿಹನೆಂದು ಮನದಿ ತಾಂ |
ಹರುಷಗೊಳದಿಹಳೆ ಕಾಣೆವೆ ನಾವಿದನು ತೆರಳಲಂತಃಪುರದೊಳೀಗಲೆ || ೮೬ ||

**ಕಂದ**
ಎನಲೊಪ್ಪುತ ಮುನಿಯವನೀ |
ಶನ ಜೊತೆಗಂತಃಪುರಕ್ಕೆ ಬರುತಿರಲಿತ್ತಲ್ ||
ಜನಪನ ಸತಿ ಸುತೆಯಿಂಗಿತ |
ವನು ತಿಳಿಯದೆ ತಾನದಿಂತು ಬೋಧಿಸುತಿರ್ದಳ್ || ೮೭ ||

**ಶುದ್ಧ ಸಾವೇರಿ - ಅಷ್ಟ (ಚಾಪು)**
ಇಂದೊ ನಾಳೆಯೊ ಪತಿ | ಮಂದಿರ ಸೇರುವೆ ||
ಚಂದಿರಮುಖಿಯೆ ನೀನು || ಪಲ್ಲವಿ ||
ಅಂದಾಚರಿಸಬೇಕಾ | ದಂದವನೊರೆವೆ ಕೇ ||
ಳಿಂದೀವರಾಕ್ಷಿ ಬಾಲೆ | ರನ್ನಕಪೋಲೆ || ೮೮ ||

ಅತ್ತೆ ಮಾವಂದ್ಯರ | ಭಕ್ತಿಯಿಂ ಕಾಣುತ ||
ಹತ್ತು ಮಂದಿಯು ಮೆಚ್ಚುವ | ಹಾಗಿಹುದವ್ವ || ೮೯ ||

ಭಾವಂದ್ಯರೊಳು ಗುರು | ಭಾವವನಿರಿಸಿ ಸ ||
ದ್ಭಾವದಿ ಮಾನಿಸೆಲೆ | ನಿತ್ಯಸುಶೀಲೆ || ೯೦ ||

ಮೈದುನರೊಳು ಭಿನ್ನ | ಭೇದವ ತೋರದೆ ||
ಸೋದರರಂತೆಣಿಸು | ಲೋಭವ ಜೈಸು || ೯೧ ||

ದಾಸದಾಸಿಯರೊಳು | ದೋಷಗಳನೆ ಕಂಡು ||
ದೂಷಿಸಬೇಡ ಸದಾ | ಬಿಟ್ಟಿರು ಕ್ರೋಧ || ೯೨ ||

ಕಾಂತನ ತಪ್ಪನು | ಕಾಂತೆ ನೀನರಿದರೆ ||
ಶಾಂತಿಯೊಳೇಕಾಂತದೇ | ಪೇಳ್ ಸರಸದೆ || ೯೩ ||

ಸವತಿ ಮತ್ಸರವದು | ಲವಲೇಶವಿರದೆ ವಿ ||
ಭವದೆ ಗರ್ವವ ತಾಳದೆ | ನೀನಿರು ಮುಂದೆ || ೯೪ ||

ಐದೊಂದು ಗುಣದಿ ಕು | ಲೋದ್ಧರೆಯಾಗಿರು ||
ಮಾಧವನನು ಭಜಿಸಿ | ಸುವಿರಾಜಿಸಿ || ೯೫ ||

**ಭಾಮಿನಿ ಷಟ್ಪದಿ**
ಇಂತು ನಿಜ ಸುಕುಮಾರಿಗಾ ನೃಪ |
ಕಾಂತೆಯುಪದೇಶಿಸುತಲಿರೆ ಘನ |
ವಂತ ಪರ್ವತ ಬರಲು ಮಾತಾಪುತ್ರಿಯರು ನಮಿಸಿ ||
ನಿಂತಿರಲರಳ ಸರಳ ಮಳೆಯಂ |
ಕಂತುಕರೆಯಲ್ಕವಗೆ ನಾರದ |
ನಂತೆ ವಿರಹಾನಲದೆ ಕುದಿಯುತಲಿಂತು ಚಿಂತಿಸಿದ || ೯೬ ||

**ಧನ್ಯಾಸಿ - ಏಕ**
ಮನವೇನೀತೆರ ಕಾತರಿಸುವುದೀ | ಜನಪನ ಸುತೆಗೆಳಸಿ ||
ಮನಸಿಜನಿಕ್ಕಿದ ಬಲೆಯೊಳು ಸಿಕ್ಕಿದ |
ಜನ ಸಾಮಾನ್ಯರಿಗೆಣೆಯಾದೆನೆ ನಾಂ || ೯೭ ||

ನಾರದನೊಂದಿಗೆ ತೆಗಳಿದೆನೇಕೋ | ಮಾರನ ವಿಧವಿಧದಿ ||
ಗೌರೀಶನ ತಪ ಸೂರೆಯ ಗೊಂಡಿಹ |
ವೀರನ ವೈರವ ಗಳಿಸಿದೆನೇತಕೆ || ೯೮ ||

ಸುರಜನ ಮುನಿಜನ ವರರೆನ್ನನು ಕರೆ | ಕರೆದೊಗುಮಿಗೆ ನಗುವ ||
ತೆರನಾದುದೆ ಮೇಣ್ ಸುರಮುನಿಯರಿದುರೆ |
ಕರತಾಡನ ಮಾಡುವರೆಡೆಯಾಯ್ತು || ೯೯ ||

**ಕಂದ**
ಎಂದಾ ಮುನಿ ಪೂಗಣೆಯಿಂ |
ಬೆಂದಾ ನಾರಂದನಂದ ನಿರ್ಧರಿಸಿದ ತಾ ||
ನಿಂದೀ ತರುಣಿಯ ವರಿಸುವೆ |
ನೆಂದೀ ಮತಮಂ ಧರೇಶನರಸಿಯೊಳೊರೆದಂ || ೧೦೦ ||

**ಅಠಾಣ - ಅಷ್ಟ (ಚಾಪು)**
ಏನೆಂಬೆ ದೈವ ಪ್ರೇರಣೆಯಿಂದಲೆಂಬಂತೆ |
ಸನ್ಯಾಸಿಯಾದೆನ್ನ ಮಾನಸದೆ ||
ತಾನುದಿಸಿದೆ ಮೋಹವೀನಿನ್ನ ತನುಜೆಯೊ |
ಳೀನುಡಿ ದಿಟ ಹರಿಯಾಣೆ ಸಂಪನ್ನೆಯೆ || ೧೦೧ ||

ಅದರಿಂದ ವೈವಾಹ ವಿಧಿಯಪೂರ್ವಕವಾಗಿ |
ಸುದತಿಯನೆನಗೀವುದತಿ ಹಿತದಿ ||
ಹೃದಯೇಶ್ವರಿಗೆ ಸೊಗವೊದಗಿಸುತಲೂನ ವಿ |
ಲ್ಲದೆ ನಡೆಸುವೆನು ನೀನದಕೆ ಶಂಕಿಸದಿರು || ೧೦೨ ||

ರಾಣಿ ತಾನೊರೆದಳು ಮಾನ್ಯ ಮುನೀಂದ್ರರೆ |
ನಾನೊಪ್ಪಿದೆನು ನಿಮ್ಮ ಕೇಳಿಕೆಗೆ ||
ಕ್ಷೋಣಿಯೊಳಾನಿಂದು ಧನ್ಯೆಯೆನ್ನಿಸಿದೆ ವಾ |
ಗ್ದಾನಕೆ ಪುಸಿಯಿಲ್ಲದೆನ್ನ ಮಗಳನೀವೆ || ೧೦೩ ||

**ಕಂದ**

ಇಂತಿರೆ ಪೊರಟಿಹ ಧರಣೀ |
ಕಾಂತಂ ಗೀರ್ವಾಣಯೋಗಿಯಿಂದೊಡಗೂಡು ||
ತ್ತಂತಃಪುರಕೈತರೆ ನೃಪ |
ಕಾಂತೆಯು ತಾನೀರ್ವರಿಂಗೆರಗಿ ಸವಿನಯದಿಂ || ೧೦೪ ||

**ಭಾಮಿನಿ ಷಟ್ಪದಿ**

ನಿಂದಿರಲು ನೃಪಕಾಣುತಾ ಮೌ |
ನೀಂದ್ರ ಪರ್ವತಗೆರಗಿದನು ನಾ |
ರಂದನಂದವ ಬಣ್ಣಿಸಲಿಕಾರಿಂದಲಳವಾಗ ||
ಕಂದಿತಾನನ ಬೆಮರಿದುದು ತನು |
ಕುಂದಿತೆದೆಯಾಮುನಿಗೆ ಪರ್ವತ |
ಗಂದು ಬಾಯೊಣಗಿದುದು ನಾಣ್ಚಿತು ಮನವು ಶಂಕೆಯೊಳು || ೧೦೫ ||

**ಹಂಸಾನಂದಿ - ಝಂಪೆ (ಭೈರವಿ – ಝಂಪೆ)**

ಆಗ ನೃಪನೊರೆದನಾ | ನಾಗಗಮನೆಯೊಳು ಹೇ ||
ನಾಗವೇಣಿಯೆ ಲಾಲಿ | ಸಾಗಮದ ಬಗೆಯ || ೧೦೬ ||

ಭಾಗ್ಯರವಿದರ್ಶನ | ಶ್ಲಾಘ್ಯತಾಗಮನ ಘನ ||
ಯೋಗ್ಯತಾಕ್ರಮಣ ಶುಭ | ಯೋಗವಾದುದೆಲೆ || ೧೦೭ ||

ಸತಿಯೆ ಕೇಳೆಮ್ಮ ಶ್ರೀ | ಮತಿಯನೀ ವಂದ್ಯಮುನಿ ||
ಪತಿ ಬಯಸಲೊಪ್ಪಿದೆನು | ಹಿತವೆ ನಿನಗುಸುರು || ೧೦೮ ||

ತೋಷವಡಗುತಲಿ ಜೀ | ವೇಶಗರುಹಿದಳು ಮೌ |
ನೀಶ ಪರ್ವತಗೆಂದ | ಭಾಷೆಯಾ ಕಥೆಯ || ೧೦೯ ||

ಮೋಸವಾಯ್ತೆಲೆಗೆ ಯೋ | ಗೀಶರೆಸಗಿದ ನಿಜ ವಿ ||
ಲಾಸವೇ ದಿಟ ಹಾಯ್ ರ | ಮೇಶ ಹಾಯೆನುತ || ೧೧೦ ||

**ವಾರ್ಧಕ (ಅರ್ಧ)**

ಮರುಗಿ ಮನದಲ್ಲುಭಯ ಮುನಿಪರೊಳು ಮೇಲು ಕೀ |
ಳರಿಯೆನಾರಿಂಗೆ ನಾನೀವೆನೀ ಶ್ರೀಮತಿಯ |
ನರರೆ ಮುಂದೇನೆಂದು ಕಳವಳಿಪುದನು ತಿಳಿದು ನಾರದಂ ನೃಪಗೆಂದನು || ೧೧೧ ||

**ಮಧ್ಯಮಾವತಿ - ತ್ರಿಪುಟ (ಮಿಶ್ರ)**
ನೀನೆನಗಿತ್ತೆ ಮಾತ | ರಾಣೆಯೊಳು ವಾ |
ಗ್ದಾನ ಪಡೆದ ಪರ್ವತ ||
ಮಾನನಿಧಿ ದುರ್ಮಾನವೇತ |
ಕ್ಯೂನವೆಳ್ಳನಿತಿಲ್ಲ ನಿರ್ಮೊಳು ||
ತಾನೆಯೆಮ್ಮಲ್ಲೊರ್ವನನು ಸ |
ನ್ಮಾನಿಸಲಿ ತವ ತರಳೆಯೊಲಿದು || ೧೧೨ ||

ನಾಳಿಗೆ ನಡೆಯಲಯ್ಯ | ಸ್ವಯಂವರ |
ಲೀಲೆಯಿಂ ತಿರೆಯ ರಾಯ ||
ಬಾಲಿಕೆಯೆ ತಾ ಮೆಚ್ಚಿಯೊಬ್ಬಗೆ |
ಮಾಲೆಯಿಕ್ಕಿದಡಿಲ್ಲ ಜಗಳ ವಿ ||
ಶಾಲಮತಿ ಕೇಳೆನಲು ಋಷಿಕುಲ |
ಮೌಳಿ ಪರ್ವತ ಸಮ್ಮತಿಸಿದ || ೧೧೩ ||

**ಭಾಮಿನಿ ಷಟ್ಪದಿ**
ಇಂತು ಮುನಿಗಳು ನಿರ್ಧರಿಸೆ ಭೂ |
ಕಾಂತನೊಪ್ಪಲು ಬಳಿಕಲಾ ಧೀ |
ಮಂತರೀರ್ವರು ನಾಳೆಗೈದುವೆವೆನುತ ಪೊರಡುತ್ತ ||
ಕಾಂತೆಯಲ್ಲುದಿಸಿರ್ಪ ಮೋಹದೊ |
ಳಂತಗಾಣದೆ ಪಿಸುಣರಂದದೊ |
ಳಂತರಂಗದಳೊರ್ವನೊರ್ವನ ವಂಚಿಸಲು ಬಗೆದು || ೧೧೪ ||

**ವಾರ್ಧಕ ಷಟ್ಪದಿ**
ಒಂದೊಂದು ಪಥವಿಡಿಯುತನ್ಯೋನ್ಯ ಹೊಣಕೆಯೊಳು |
ಮುಂದುಗಾಣದೆ ಮುಂದುವರಿಯುತಿರೆ ನಾರದಂ |
ಗೊಂದು ಹಂಚಿಕೆ ಹೊಳೆದುದಾ ಪರ್ವತನ ಪರಾಜಯಗೊಳಿಸಲಿಂತು ಮನದಿ ||
ಇಂದೀಗ ಸಾಗಿ ಪಾಲ್ಗಡಲೆಡೆಗೆ ದೇವಗೋ |
ವಿಂದನ ಪದಾರವಿಂದವ ನೋಡಿ ಪಾಡಿ ಮುದ |
ದಿಂದಲಾಂ ಬೇಡಿ ವರವನು ಕಾರ್ಯ ಸಾಧಿಸುವೆನೆಂದು ವೈಕುಂಠಕೈದೆ || ೧೧೫ ||

**ಸೌರಾಷ್ಟ್ರ - ತ್ರಿವುಡೆ**
ಎಂದನಾ ಮಾಧವನು ಬಹಳಾ |
ನಂದವಾದುದು ಕುಶಲವೇ ನಿನ ||
ಗಿಂದು ಸೌಖ್ಯಾಗಮನವೇ ಮುನಿ | ವೃಂದ ತಿಲಕ || ೧೧೬ ||

ಭಜಕರಿಂಗಾನೆನಿತು  ಮಾನ್ಯನೊ |
ನಿಜದೊಳವರೆನಗಂತೆ ಗಣ್ಯರು ||
ಸುಜನ ಸಂರಕ್ಷಣೆಯ ಹೊಣೆ ನಿಜ | ಭುಜದೊಳೈಸೆ || ೧೧೭ ||

ಸಾಧುಗಳು ಸಂತೃಪ್ತಿಯಿಂ ಸ |
ಮ್ಮೋದದಿಂದಿರಲಾನು ಧನ್ಯನು ||
ಸಾಧನಂಗಳನಿತ್ತು ಬಿರುದನು | ಸಾಧಿಸಿದರೇ || ೧೧೮ ||

ಈ ರಮೆಯು ವೈಕುಂಠ ಕೌಸ್ತುಭ |
ಹಾರ ಪೀತಾಂಬರಗಳೇನು ಶ ||
ರೀರ ಸಹ ಗಣಿಸುವೆನೆ ನತರು | ದ್ಧಾರಕಾಗಿ || ೧೧೯ ||

**ಹಂಸಧ್ವನಿ - ರೂಪಕ**
ನಾರಂದನೆರಗಿ ನಿನ್ನಿಂದ ಬಣ್ಣಿಸಲು ನಾ |
ನಾರೆಂದನರವಿಂದಾಕ್ಷನೊಳು ||
ನೀರಿಂದ ಬಂದಾ ಮೂರೊಂದು  ನಿಗಮ ತಂದ |
ರಾರಿಂದಿರೇಶ ನೀ ಹೊರತು  || ೧೨೦ ||

ಪರಮ ಪಾವನ ನಿನ್ನ ಕೃಪೆಗೆಲ್ಲೆಯಿರುವುದೆ |
ಬರಿದೆ ದೇಹಿಗಳೆಲ್ಲ ಭವದೆ ||
ನಿರತ ಕ್ಲೇಶದೊಳಿರುತಿಹರೀ ಪಾಮರರೊಮ್ಮೆ |
ಸ್ಮರಿಸದಿರ್ಪುದು ಕಷ್ಟ ನಿನ್ನ || ೧೨೧ ||

ಕಾಮಾದಿಗಳು ಸಹ ನಿನ್ನೊಳಾದರೆ ಮೋಕ್ಷ |
ಸಾಮ್ರಾಜ್ಯ ಸಾಧನವಹುದು ||
ಶ್ರೀಮಾನಿನಿಯು ಹಿರಣ್ಯಾಕ್ಷಾದಿಗಳು ನಿನ್ನ |
ಕಾಮಕ್ರೋಧದಿ ಸೇರ್ದರೈಸೆ || ೧೨೨ ||

ಸಗ್ಗದ ಲೋಭಗಳಗ್ಗದಿ ಬಲಿಯು ತಾ |
ನಗ್ಗಳದಾನಂದ ಪಡೆದ ||
ಭರ್ಗ ಮೋಹದಿ ಬೆರೆದನು ಮದ ಮಧುಕೈಟ |
ಭರ್ಗಳ ಮುಕ್ತಿಗಾದುದಲ || ೧೨೩ ||

ದಾತ ನೀನೆನುತ ಪರ್ವತನಲ್ಲಿ ಮತ್ಸರಿ |
ಸುತ್ತಲೈದಿದೆನು ಸನ್ನಿಧಿಗೆ ||
ಪ್ರೀತಿಯೊಳೆನ್ನ ಸಂರಕ್ಷಿಸಬೇಕೆಂದು |
ಬಿತ್ತರಿಸಿದನೆಲ್ಲ ಕಥೆಯ || ೧೨೪ ||

**ಶಹನ - ಝಂಪೆ**
ಖಲವೈರಿ ನಗುತೆಂದನೆಲೆ ಮುನಿಯೆ ವಿಷಯಗಳ |
ಗೆಲಿದವರೊಳಗ್ಗಳರು ನೀವಿರ್ವರು ||
ಲಲನೆಗೆಳಸುತಲೀಗ ತೊಳಲುವಂತಾಯ್ತೆಂದ |
ಡಳವಾರಿಗಿನ್ನು ಗೆಲಲಾ ಕಾಮನನ್ನು || ೧೨೫ ||

ಹೇ ಪರಮ ಪುರುಷ ವೈವಾಹದಿಂ ಪಾಪವೇ |
ನಾ ಪರ್ವತಂಗಾಕೆ ದೊರೆಯದಂತೆ ||
ನೀ ಪ್ರಸಾದಿಸು ನಾಳೆಗವನು ಕಪಿಮುಖದೊಳಾ |
ಭೂಪನಣುಗೆಗೆ ಕಾಣಲೆಂದೆಂಬ ವರವ || ೧೨೬ ||

**ವಾರ್ಧಕ ಷಟ್ಪದಿ**
ಲೀಲಾವಿನೋದಿಯಂತಾಗಲೆನೆ ಮುನಿ ತೆರಳೆ |
ಮಾಲಲನೆಯಾಣ್ಮನಂ ಭಜಿಸಿ ಮೇಣ್ ಪರ್ವತಂ |
ಕೇಳಿದಂ ಭಲ್ಲೂಕ ಮುಖನಾಗಿ ನಾರದಂ ಸತಿಗೆ ಕಾಂಬಂದ ವರವ ||
ಪೇಳಲೇನಾ ಶ್ರೀಮತಿಯು ಪಿರಿಯರೆಂದಂತೆ |
ನಾಳೆ ನಡೆವೆನೆ ಹರಿಯ ಮರೆಯುವೆನೆ ಹಾಯೆನುತ |
ಗೋಳಿಡುತ್ತಿರಲುರುಳಿತಿರುಳು ತತ್ಸಮಯದೊಳು ಸ್ನಾನಾದಿ ವಿಧಿ ಮುಗಿಸುತ || ೧೨೭ ||

**ಕಂದ**

ಪದ್ಧತಿಯಂತಾಕೆಯು ಮನ |
ಶುದ್ಧಿಯೊಳೈತಂದು ದೇವ ಮಂದಿರದೆಡೆಗಂ ||
ಬದ್ಧಾಂಜಲಿಯಿಂ ಬೇಡಿದ |
ಳುದ್ಧರಿಸೆನ್ನಂ ರಮೇಶ ಕೃಪೆಯಿಂದೆನುತಂ || ೧೨೮ ||

**ಮೋಹನ - ಅಷ್ಟ (ಚಾಪು)**

ಏಕೆ ನಿರ್ದಯನಾದೆ ನೀನಿಂತು ಶ್ರೀನಿಧೆ |
ನೂಕುತಿಹೆಯೊ ಋಷಿಯಾಶ್ರಮಕೆ ||
ಬೇಕು ನೀನೆಂದು ನೋಂಪಿಯ ನೋಂತರೆನಗೀಗ |
ಶೋಕವೆ ಫಲವಾಗಬಹುದೆ ಕೃಪಾಂಬುಧೆ || ೧೨೯ ||

ನಿನ್ನಾಸ್ಯ ಶಶಿದರ್ಶನಾಕಾಂಕ್ಷೆಯಲ್ಲಿಹು |
ದೆನ್ನ ಹೃತ್ಕುಮುದ ಕೋರಕವನಿಶ ||
ಇನ್ನೇನನೆಸಗಲಿ ರವಿಯುದಿಸಿದನಾಸೆ |
ಮಣ್ಣುಗೂಡಿಸಿ ಮುನಿಪತ್ನಿಯಾಗಿಸಲೆನ್ನ || ೧೩೦ ||

ಸಿರಿಯೆನ್ನ ಸವತಿಯೆಂದೆಣಿಸಿ ಮತ್ಸರದಿ ತ |
ನ್ನರಮನೆ ನೆಂಟನೀತನ ಮನ್ನಿಸಿ ||
ಭರದೊಳಟ್ಟಲಿಕೆನ್ನ ಕನಸಿನ ರಾಜ್ಯವ |
ನುರಿಸಲಿಕಿವನೈದನಲ್ಲದಿನ್ನೇನೆಂಬೆ || ೧೩೧ ||

ಮದದಿಂದಲೆದೆಯೇರಲೆಣಿಸಿಲ್ಲ ತವ ದಿವ್ಯ |
ಪದಸರೋಜದ ಸೇವೆ ಬಯಸಿದೆನು ||
ಸದಯದೊಳದ ನೀನು ಕೊಡದಿರ್ದರೆನ್ನ ದು |
ರ್ವಿಧಿಯಲ್ಲದನ್ಯವಿದಲ್ಲ ಲಕ್ಷ್ಮಿಯ ನಲ್ಲ || ೧೩೨ ||

**ಆರಭಿ - ಏಕ**

ಭಜಕರಿಗತಿಸುಲಭನು ತಾನೆನೆ ಪಂ |
ಕಜದಳಲೋಚನ ಮೈದೋರಿ ||
ನಿಜ ಶರಣೆಯ ಪಿಡಿದೆತ್ತುತೊರೆದ ವಾ |
ರಿಜಮುಖಿ ಚಿಂತಿಸಬೇಡೆಲೆ ಮನದಿ || ೧೩೩ ||

ಬರುವೆನು ಮದುವೆಯ ಮಂಟಪದೆಡೆಗಾ |
ನರಗುವರನ ತೆರದೊಳು ದಿಟವು ||
ಕೊರಳೊಳು ಮಾಲೆಯನಿಕ್ಕು ನೀನಾಗಲೆ |
ವರಿಸುವೆ ಮರೆವೆನೆ ತೆರಳಲೆ ಜವದೆ || ೧೩೪ ||

**ವಾರ್ಧಕ ಷಟ್ಪದಿ**

ಹರಿಯಿಂತು ಪೇಳಿ ಮರೆಯಾಗಲಾ ಸತಿಯು ಮಂ |
ದಿರವನುಳಿಯುತ ಗೇಹಕೈದಲಿತ್ತಲು ನೃಪತಿ |
ಕರೆಸಿ ತನ್ನಾಪ್ತರನು ಸಕಲ ಸನ್ನಾಹಮಂ ನೆರಹಿ ಸಂತಸದೊಳಿರಲು ||
ನೆರೆದ ಸಭೆಯಿಂ ಚಪ್ಪರದ ಶೋಭೆ ಮೆರೆಯೆ ಮುನಿ |
ವರರಾಗ ಬರಲು ನೃಪದಂಪತಿಗಳಿದಿರೆದ್ದು |
ಚರಣಗಳ ತೊಳೆದು ಕರ ಪಿಡಿದೊಯ್ದು ಮಂಟಪದೊಳವರ ಕುಳ್ಳಿರಿಸಿ ಬಳಿಕ || ೧೩೫ ||

**ಸಾಂಗತ್ಯ - ರೂಪಕ**

ಕುವರಿಯ ಕರತಂದು ಹೂಮಾಲೆ ಕೈಗೀಯು |
ತಿವರೊಳು ನೀನೊಪ್ಪುವವರ ||
ಸವಿನಯದಿಂದ ಸ್ವೀಕರಿಸುತ್ತಲುಭಯಾನ್ವ |
ಯವ ಬೆಳಗಿಸುವುದೆಂದೆನಲು || ೧೩೬ ||

ಮೊದಲೆ ನಿಶ್ಚಯವಾದ ತೆರದೆ ಭೂಪನ ಪುತ್ರಿ |
ಮದುವೆ ಮಂಟಪದೆಡಬಲವ ||
ಮುದದಿ ನೋಡಲು ಪೇಳಿದಂತೆ ಬಂದಿರುವ ಶ್ರೀ |
ಪದುಮನಾಭಗೆ ಶಿರ ಬಾಗಿ || ೧೩೭ ||

ಕಪಿ ಕರಡಿಗಳನ್ನು ವರಿಪೆನೆ ಜಗದೊಳು |
ನೃಪನಾತ್ಮಭವೆಯಾದ ಬಳಿಕ ||
ತಪಸಿಗಳಿಗೆ ಯಾತಕೀ ಪುಷ್ಪಮಾಲಿಕೆ |
ಜಪಮಾಲೆಯಲ್ಲವೆ ಯೋಗ್ಯ || ೧೩೮ ||

ಮಾಲೆ ಹಾಕಿದಳರಗುವರನಂತೆಸೆವ ಮಾ |
ಲೋಲನ ಕಂಠದೊಳಾಗ ||
ಕಾಲಭೈರವನಟ್ಟಹಾಸಕಿಮ್ಮಡಿಯಾಗಿ |
ಹೇಳಿದರಾ ಮುನಿವರರು || ೧೩೯ ||

**ಸೌರಾಷ್ಟ್ರ - ತ್ರಿವುಡೆ**

ನೋಡಿದಿರೆ ಜನರೆಲ್ಲ ನಿಮ್ಮಯ |
ನಾಡಿನೊಡೆಯನು ಗೈದ ಮೋಸವ ||
ರೂಢಿಪಾಲಾತ್ಮಜನ ತಾ ಬರ | ಮಾಡಿಕೊಂಡು || ೧೪೦ ||

ಮೌನಿವರರಾದೆಮ್ಮ ನಿಂತಪ |
ಮಾನಗೊಳಿಸಿದ ಬಗೆಯನೆಲ್ಲ ನಿ ||
ಧಾನಿಸಿರಿ ನಾವಿವನ ಬಿಡುವೆವೆ | ಕಾಣಬಹುದು || ೧೪೧ ||

ಎಲವೊ ವೈವಸ್ವತನ ಕುಲದೊಳು |
ಹುಲುನೃಪಾಧಮ ನೀನು ಜನಿಸಲು ||
ಫಲವಿದಾದುದು ಶುದ್ಧವಿಳೆ ನೀ | ಸಲಹಿದಲ್ಲಿ || ೧೪೨ ||

ಅಡವಿಯೊಳು ತಿರುಗಾಡಿ ತಿನ್ನುವ |
ಬಡವರೆನ್ನುತ ತಿಳಿದಿಯೇಂ ಫಡ ||
ಸುಡಲು ಬಲ್ಲೆವು ನಿನ್ನ ಶಪಿಸುತ | ಬಿಡುವೆವೇನೈ || ೧೪೩ ||

**ಕಂದ**

ಎಂದಾಕ್ರೋಶದಿ ನಿಂದಿರ |
ಲಿಂದಿರೆಯರಸಂ ನಿಜಾಕೃತಿಯೊಳಲ್ಲೆಸದಾ ||
ನಂದದೊಳೊರೆದಂ ಹೇ ಮೌ |
ನೀಂದ್ರರೆ ಸೈರಿಸಿರೆನುತ್ತಲೀ ಸವಿನುಡಿಯಂ || ೧೪೪ ||

**ರಾಗಮಾಲಿಕೆ - ಝಂಪೆ**
ಕಂತುವನು ಸುರಪತಿಯು ಬಹುಮಾನಿಪಂದು ಧೀ |
ಮಂತರಿರ್ವರು ನೀವು ಬೈದುದೇಕೆ ||
ಸಂತತವು ಭೋಗಿಜನರಾತನನು ಪೂಜಿಸಲಿ |
ಬಂತೇನು ಕೊರತೆ ನಿಮಗದರಿಂದ ಪೇಳಿ || ೧೪೫ ||

ಮಾನ್ಯರೆನ್ನುವ ಮದ ವಿರಕ್ತರೆಂಬುವ ಗರ್ವ |
ವನ್ನಿಳಿಸಲೆನುತಿಂತು ನಿಮ್ಮ ನಾನು ||
ಎನ್ನ ಮಾಯಾಸೂತ್ರದೊಳು ಬಂಧಿಸುತ್ತಲೀ |
ಮಾನಿನಿಗೆ ನೀವೆಳಸುವಂತೆ ಗೈದಿಹೆನು || ೧೪೬ ||

ಅಪರಾಧಿಯಲ್ಲ ನೃಪನದರಿಂದೆ ನೀವೆನ್ನ |
ಕಪಟನಾಟಕದಿ ನಟಿಸುತ್ತೆ ಬಹಳ ||
ತಪಿಸಿದಿರಿ ಕಾಮಿಪರಿಗುಪಮಾನವಾಯ್ತಲ್ಲ |
ದಪಮಾನ ನಿಮಗಿಲ್ಲವಿದರಿಂದೆ ಜಗದೆ || ೧೪೭ ||

ಎನಗೆ ಸತಿಯಾದಳೀ ಶ್ರೀಮತೀ ವನಿತೆ ಸುರ |
ಮುನಿವರರೆ ಬಿಡಿರಿನ್ನು ಮೋಹವನ್ನು ||
ಜನಕೆ ಸುಜ್ಞಾನವನು ಬೋಧಿಸುತ ಮೂಲೋಕ |
ವನು ಚರಿಸುತಿರಿ ನೀವು ಮೊದಲಿನಂದದೊಳು || ೧೪೮ ||

**ವಾರ್ಧಕ ಷಟ್ಪದಿ**
ಹರಿಯೆ ನಿನ್ನ ವಿನೋದಲಹರಿಯೆಮ್ಮಯ ಮೂಗ |
ಹರಿವ ಹರಿತದ ಕತ್ತಿಯಾಯ್ತಲ್ಲದೀಗಳೀ |
ಹರಿಣಾಕ್ಷಿಗಾಗಿ ತರಹರಿಪಂತೆ ಗೈದ ನೀನದರಿನಿಂ ನಮ್ಮಂದದೆ ||
ಹರಿಮಧ್ಯೆಯಂ ನೀಗಿ ಮರುಗಿ  ನಾವ್ ಧರಿಸಿರ್ದ |
ಹರಿಯ ಮೊಗವುಳ್ಳವರು ಸಹಕರಿಸಿದರೆ ಮರಳಿ |
ಹರಿಣಾಂಕಮುಖಿ ದೊರೆಯಲೆಂದು ಮುನಿಗಳು ಶಪಿಸಲೆಂದನಾನಂದಮಯನು || ೧೪೯ ||

**ಮಧ್ಯಮಾವತಿ - ಏಕ**
ಪರಮಾದರದೊಳು ಧರಿಸಿದೆ ನಿಮ್ಮೀ |
ವರವಚನವನಾನು ||
ಧರೆಯೊಳು ಧರ್ಮಸ್ಥಾಪನೆಗಿದು  ಸಹ |
ಕರಿಪಾನುಗ್ರಹವಲ್ಲದೆ ಶಾಪವೆ || ೧೫೦ ||

ಶರಣರ ಪೊರೆಯಲು ಜನಿಸುವೆ ದಶರಥ |
ನರಸಿಗೆ ಮಗನಾಗಿ ||
ತರುಣೀಮಣಿ ಶ್ರೀಮತಿ ಸತಿ ಜನಕನ |
ತರಳೆಯೆನಿಸುತೆನ್ನರಗಿಣಿಯಹಳು || ೧೫೧ ||

ಅಡವಿಯೊಳಾವಿರಲೀಕೆಯ ರಕ್ಕಸ |
ರೊಡೆಯನು ಕದ್ದೊಯ್ಯೆ ||
ಕಡು ಕಷ್ಟದೆ ತಾನಿರಲು ಸತೀತ್ವವ |
ಬಿಡದೆಯೆ ನಾರೀಧರ್ಮವ ತೋರ್ಪಳು || ೧೫೨ ||

ಪುಡುಕುತಲೀಕೆಯ ನಾನ್ಯೈದುತೆ ಕಪಿ |
ಗಡಣದ ಗೆಳೆತನದಿ ||
ಜಡಧಿಗೆ ಸೇತುವ ಬಂಧಿಸಿ ದುಷ್ಟರ |
ಪಡೆಯ ತರಿದು ಸನ್ಮಂಗಲವೀವೆನು || ೧೫೩ ||

ಗುಣದಲಿ ಪೆರ್ಚುತ ಮಳೆಬೆಳೆಯಾಗುತ |
ಜನಗಣ ಮನದಣಿಯೆ ||
ಉಣುತಾನಂದವ ನಾಡನು ಬೆಳಗಿಸಿ |
ಕುಣಿಯಲಿ ಶಾಂತಿಯ ಬೆಳದಿಂಗಳಲಿ || ೧೫೪ ||

**ಕಂದ**

ಇಂತೆಂದೆಲ್ಲರನಾ ಶ್ರೀ |
ಕಾಂತಂ ಸಂತೋಷವಾರಿನಿಧಿಯೊಳ್ ಕೆಡಹು ||
ತ್ತಂತರ್ಧಾನವ ಪೊಂದಲ್ |
ಸಂತರ್ ಗೋವಿಂದ ದೇಹಿ ಮಂಗಲಮೆಂದರ್ || ೧೫೫ ||

ಕಣ್ವಪುರೇಶನ ಪದ ಕಾ |
ರುಣ್ಯದೆ ಗೋಪಾಲಕೃಷ್ಣ ಹರಿದಾಸಂ ನಾಂ ||
ಬಣ್ಣಿಸಿದೆಂ ಕನ್ನಡ ನುಡಿ |
ವೆಣ್ಣಿನೊಳಿಹ ಭಕ್ತಿ ಭಾವದಿಂದೀ ಕಥೆಯಂ || ೧೫೬ ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಶ್ರೀಕೃಷ್ಣ ಯಕ್ಷಸಭಾ, ಮಂಗಳೂರು - ೨೦೦೬

**ಪ್ರಸಂಗ ಪ್ರತಿ ಆಧಾರ:** ಶ್ರೀಕೃಷ್ಣ ಯಕ್ಷಸಭಾ, ಮಂಗಳೂರು ಪ್ರಕಟಿತ ಶೇಣಿ ಸ್ಮೃತಿ ಕೃತಿ ಪುಸ್ತಿಕೆ - ೨೦೦೬

**ಪ್ರಸಂಗ ಪ್ರತಿ ಕೊಟ್ಟವರು:** ಗಿಂಡೀಮನೆ ಮೃತ್ಯುಂಜಯ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಮುರಳಿ ಶೇಣಿ

**ಅಂತರಜಾಲ ಪ್ರತಿ ಬರವಣಿಗೆ:** ಶಶಿಕಲಾ ಮೂರ್ತಿ

**ಅಂತರಜಾಲ ಪ್ರತಿ ವಿನ್ಯಾಸ:** ರವಿ ಮಡೋಡಿ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ಶಿವಕುಮಾರ ಬಿ. ಎ. ಅಳಗೋಡು, ನಟರಾಜ ಉಪಾಧ್ಯ, ಅಶ್ವಿನಿ ಹೊದಲ